ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಜಿಲ್ಲಾಪರಿಷತ್ತಿನ ಚುನಾವಣೆಗಳನ್ನು ಆರು ತಿಂಗಳ ಕಾಲ ಮುಂದಕ್ಕೆ ಹಾಕುತ್ತೇವೆಂದು ಮಾನ್ಯ ಮಂತ್ರಿಗಳು ಪತ್ರಿಕೆಯಲ್ಲಿ ಹೇಳಿದ್ದಾರೆ.

ಪ್ರಕಟಣೆ

ಉಪಾಧ್ಯಕ್ಷರು : ಮಾನ್ಯ ಏಕಾಂತಯ್ಯನವರು ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿಕೊಟ್ಟಿದ್ದಾರೆ. ಈಗ ಮತ್ತೊಂದು ವಿಷಯ. I am very happy to announce that Hon'ble Speaker from Canada Procan Manitoba is amidst us in the Visitors' Gallery. He is seated in the Distinguished Visitors' Gallery. I, on behalf of all of you, extend a hearty and warm welcome to him.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೇ, ಮುಖ್ಯಮಂತ್ರಿಯವರ ಕ್ಷೇತ್ರವಾದ ಸೊರಬಾದಲ್ಲಿ ಪತ್ರಿಕಾಕರ್ತರ ಮೇಲೆ ಕೇಸ್ ಹಾಕಿದ್ದಾರೆ, ಅವರಿಗೆ ಬಂಧನ ಮಾಡುವಂಥ ಪ್ರಯತ್ನ ನಡೆದಿದೆ. ಮರ ಕಡಿಯುವ ಕಳ್ಳಸಾಗಣೆದಾರರಿಂದ...

ಉಪಾಧ್ಯಕ್ಷರು : ಅವರು ಪ್ರಿವಿಲೇಜ್ ಮೋಷನ್ ಕೊಟ್ಟಿದ್ದಾರೆ, ಅದಕ್ಕೆ ಪ್ರಿಯಾರಿಟಿ ಕೊಡಬೇಕಾಗಿದೆ. ಇದಾದ ಮೇಲೆ ನಿಮ್ಮನ್ನು ಕರೆಯುತ್ತೇನೆ.

ಹಕ್ಕು ಭಾದ್ಯತಾ ಸೂಚನೆ

ಸರ್ಕಾರ ಆಜ್ಞೆಗಳನ್ನು ಸದಸ್ಯರಿಗೆ ಒದಗಿಸದಿರುವುದು.

ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಮಾನ್ಯ ಉಪಾಧ್ಯಕ್ಷರೇ, ನಿಯಮ 191ರ ಪ್ರಕಾರ, ನಾನು ಹಕ್ಕುಬಾಧ್ಯತೆಯ ಪ್ರಶ್ನೆಯ ಸಂಬಂಧದಲ್ಲಿ ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದೇನೆ. I have sent a notice under rule 191 raising a privilege issue regarding non-supply of Government Orders to the Members to discharge their functions in this House.

ದಿನಾಂಕ : 19-9-91ರಂದು ಕೆಲವು ಪ್ರಮುಖವಾದ ಸರ್ಕಾರಿ ಆದೇಶಗಳಲ್ಲಿ ಏನು ಅಡಕವಾಗಿದೆ, ಆ ವ್ಯವಹಾರಕ್ಕೆ ಸಂಬಂಧಿಸಿದಂತೆ, 4 ಸರ್ಕಾರಿ ಆದೇಶಗಳನ್ನು ಒದಗಿಸಬೇಕೆಂದು ತಮ್ಮ ಕಾರ್ಯಾಲಯದ ಸಿಬ್ಬಂದಿಯನ್ನು ವಿನಂತಿಸಿಕೊಂಡಿದ್ದೆ.

ವಿನಂತಿಸಿಕೊಂಡಿದ್ದಮೇಲೆ 20ನೇ ತಾರೀಖು ಆದರೂ ಸಹ ಅವು ನನಗೆ ಸಿಕ್ಕದೇ ಇದ್ದುದರಿಂದ ಮತ್ತು ಸದರಿ ವಿಷಯಗಳು ಕೋಟ್ಯಾಂತರ ರೂಪಾಯಿಗಳ ವ್ಯವಹಾರಕ್ಕೆ ಸಂಬಂಧಪಟ್ಟವಾಗಿದ್ದುದರಿಂದ ತೀವ್ರವಾಗಿ ಅವುಗಳನ್ನು ಒದಗಿಸಬೇಕೆಂದು ನಾನು ತಮ್ಮನ್ನು ಕೇಳಿಕೊಂಡಿದ್ದೆ. ಮತ್ತು 20ನೇ ತಾರೀಖು ಈ ಸದನದಲ್ಲಿ ಈ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೆ. ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಘನ್ಯ ಮುಖ್ಯ ಮಂತ್ರಿಗಳು ಅವು ಸರಕಾರಿ ಆದೇಶದಾಗಿರುವುದರಿಂದ ಅವನ್ನು ಮುಚ್ಚಿಡುವಂತಹ ಪ್ರಶ್ನೆ ಇಲ್ಲ. ಅವುಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂಬ ಮಾತನ್ನೂ ಸಹ ಸಭೆಯಲ್ಲಿ ಆಡಿದರು. ತದನಂತರ 23.9.91ರಂದು ಸಂಬಂಧಪಟ್ಟಂತಹ ಇಲಾಖಾ ಕಾರ್ಯದರ್ಶಿಯವರು ಹೇಳುತ್ತಾರೆ, ಯಾವ ಒಂದು ಹಿನ್ನೆಲೆಯಲ್ಲಿ ಮತ್ತು ಯಾವ ನಿಯಮಗಳ ಪ್ರಕಾರ ಈ ಒಂದು ಆದೇಶಗಳನ್ನು ಒದಗಿಸಿಕೊಡಬೇಕೆಂಬುದನ್ನು ತಿಳಿಸಿ ಎಂಬ ಮಾತನ್ನು ಹೇಳುವುದರ ಮುಖಾಂತರ

ಅವರು ಉದ್ದೇಶಪೂರ್ವಕವಾಗಿ, ಈ ಸದನದ ಸದಸ್ಯರಿಗೆ ಆದರ ಪ್ರತಿಗಳನ್ನು ಒದಗಿಸುವುದಕ್ಕೆ ನಿರಾಕರಿಸಿದ್ದಾರೆ ಅಷ್ಟೇ ಅಲ್ಲ ಇದರಿಂದ ಈ ಸದನದ ಮತ್ತು ಸದಸ್ಯರ ಹಕ್ಕುಚ್ಯುತಿಯಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಭೆಗೆ ಗೊತ್ತಿದೆ, ಈಗಾಗಲೇ ಸರಕಾರ ಅನೇಕ ವಿಚಾರದಲ್ಲಿ ಸುತ್ತೋಲೆಗಳನ್ನು ಕಳುಹಿಸಿದೆ. ಸೂಚನೆಗಳನ್ನು ಕಳುಹಿಸಿದೆ. ಈ ಸುತ್ತೋಲೆ ಮತ್ತು ಸೂಚನೆಗಳ ಪ್ರಕಾರ ಸಂಬಂಧಪಟ್ಟ ಇಲಾಖಾ ಕಾರ್ಯದರ್ಶಿಯವರು ತಮಗೆ 300ಕ್ಕಿಂತಲೂ ಹೆಚ್ಚು ಆದೇಶದ ಪ್ರತಿಗಳನ್ನು ಕಳುಹಿಸಬೇಕು. ಆ ಪ್ರತಿಗಳನ್ನು ತಾವು ನಮ್ಮಂಥವರಿಗೆ ಒದಗಿಸುವುದಕ್ಕೆ ಸಹಾಯವಾಗುತ್ತದೆ ಎಂಬ ದೃಷ್ಟಿಯಿಂದ ಈ ರೀತಿ ಮಾಡಲಾಗಿದೆ. ಅಷ್ಟೇ ಅಲ್ಲ ಸರಕಾರದವರು ಈಗಾಗಲೇ ಇದರ ಬಗ್ಗೆ ಸೂಚನೆಗಳನ್ನೂ ಕೊಟ್ಟಿದ್ದಾರೆ. ನಂ:ಜೆಎಡಿ 2 ಎಸ್‌ಐಎಮ್ 59 ದಿನಾಂಕ 15.1.59ರಲ್ಲಿ ಅಂದರೆ ಸುಮಾರು 30 ವರ್ಷಗಳ ಹಿಂದೆಯೇ ಇದನ್ನು ಮಾಡಿದೆ, ಇವತ್ತಲ್ಲ ಸದಸ್ಯರಿಗೆ ಕೆಲಸ ನಿರ್ವಹಣೆ ಮಾಡುವುದಕ್ಕೆ ಬೇಕಾದಂಥ ವಿಚಾರಗಳಿಗೆ ಸಂಬಂಧಪಟ್ಟಂತೆ, ಸಾರ್ವಜನಿಕರ ಹಿತಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ಸರಕಾರದ ಸುತ್ತೋಲೆ ಆಗಿದ್ದರೆ, ಅಷ್ಟೇ ಅಲ್ಲ, ಬೇರೆ ಬೇರೆ ವಿಚಾರಗಳು ಇದ್ದರೂ ಸಹ ಅಂತಹ ಮಾಹಿತಿಗಳನ್ನು ಸದಸ್ಯರಿಗೆ ಕೊಡಬೇಕೆಂದು ಸರಕಾರ ಆದೇಶ ಮಾಡಿದೆ. ಇತ್ತೀಚೆಗೆ 21.10.86 ರಂದು ಸರಕಾರ ಒಂದು ಆದೇಶ ಹೊರಡಿಸಿದೆ. ಡಿಪಿಎಆರ್ 60 ಎಆರ್ 86, ದಿನಾಂಕ 21.10.86 ಇದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ದಿಸ್ ಈಸ್ ದಿ ಪ್ರೊಸೀಡಿಂಗ್ಸ್.

"ವಿಧಾನಮಂಡಲದ ಕಾರ್ಯಾಲಯಕ್ಕೆ ಸರಕಾರಿ ಆಜ್ಞೆ, ಸುತ್ತೋಲೆ ಇತ್ಯಾದಿಗಳನ್ನು ಸರಬರಾಜು ಮಾಡುವ ಬಗ್ಗೆ :

ರಾಜ್ಯಪತ್ರದ ಸಕಾಲಿಕ ಅಲಭ್ಯತೆಯ ಹಿನ್ನೆಲೆಯಲ್ಲಿ ವಿಧಾನಸಭೆಯ ಅಧ್ಯಕ್ಷರು, ಸರಕಾರ ಹೊರಡಿಸುವ ಆದೇಶಗಳನ್ನು ಶಾಸಕರಿಗೆ ಸರಬರಾಜು ಮಾಡುವಂತೆ ಹೇಳಬೇಕು. ಸ್ವತಃ ಸರಕಾರ ಸರಬರಾಜು ಮಾಡುವುದಕ್ಕೆ ಆಗದಿದ್ದರೆ, ಅಂತಹ ಆದೇಶಗಳ 300 ಪ್ರತಿಗಳನ್ನು ವಿಧಾನಮಂಡಲದ ಕಾರ್ಯಾಲಯಕ್ಕೆ ಕಳುಹಿಸಿದರೆ, ಅವರು ಸದಸ್ಯರಿಗೆ ತಲುಪಿಸುವ ವ್ಯವಸ್ಥೆ ಮಾಡುವುದಾಗಿ ಬರೆದಿರುವ ವಿಚಾರವನ್ನು ತಾರೀಖು 8.9.86 ರಂದು ನಡೆದ ಕಾರ್ಯದರ್ಶಿಗಳ ಸಭೆಯಲ್ಲಿ ಚರ್ಚಿಸಲಾಯಿತು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪ್ರತಿನಿಧಿಗಳಾದ ಶಾಸಕರು, ಪ್ರಜೆಗಳ ಕಲ್ಯಾಣ ಕಾರ್ಯಕ್ರಮಗಳು ಮುಂತಾದ ವಿಚಾರದಲ್ಲಿ ಹೊರಡಿಸುವ ಆಜ್ಞೆ, ಆದೇಶಗಳನ್ನು ಅರಿಯಲು ಸದಸ್ಯರಿಗೆ ಆಸಕ್ತಿ ಇರುವುದು ಸಹಜ ಎಂಬ ಅಂಶವನ್ನು ಸಭೆಯು ಗಮನಿಸಿ ಆಜ್ಞೆ ಮುಂತಾದವುಗಳ ಪ್ರಾಮುಖ್ಯತೆ ಮತ್ತು ಗಹನತೆಯನ್ನು ಕಾರ್ಯದರ್ಶಿತಗಳು ಗಮನಿಸಿ ಅವುಗಳ 300 ಪ್ರತಿಯನ್ನು ವಿಧಾನಮಂಡಲದ ಕಾರ್ಯಾಲಯಕ್ಕೆ ಕಳುಹಿಸಿಕೊಡಬೇಕೆಂದು ತೀರ್ಮಾನಿಸಲಾಯಿತು" ಇದು ಒಂದು ಸರಕಾರಿ ಸುತ್ತೋಲೆಯಲ್ಲಿ ಅಡಕವಾಗಿರುವಂತಹ ಅಂಶ ಹಾಗಾದರೆ ಇಂತಹ ಒಂದು ಸುತ್ತೋಲೆಗಳ ಪ್ರತಿಗಳನ್ನು ಕಳುಹಿಸಿಕೊಡುವುದಕ್ಕೆ ಸರಕಾರಕ್ಕೆ ಇರುವಂತಹ ಅಡ್ಡಿ ಆತಂಕ ಏನು? ಇದರ ಹಿಂದೆ ದುರುದ್ದೇಶ ಇದೆ. ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಟ್ಟಿದ್ದೆ. ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಟ್ಟಿದ್ದೆ. ಆದರೆ ಆದೇಶಗಳು ನನಗೆ ಸಿಗಲಿಲ್ಲ. ಮುಚ್ಚಿಡುವ ಪ್ರಯತ್ನ ಆಗುತ್ತಿದೆ.

SRI M. VEERAPPA MOILY : I don't understand.

ಶ್ರೀ ವಾಟಾಳ್ ನಾಗರಾಜ್ : ಮುಚ್ಚಿಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಆ ಕಾಗದ ಪತ್ರಗಳನ್ನು ಸದಸ್ಯರಿಗೆ ಕೊಡದೇ ಮುಚ್ಚಿಟ್ಟಿದ್ದಾರೆ. ಸದಸ್ಯರಿಗೆ ಬಂದರೆ ಈ ಸದನದಲ್ಲಿ ಅದು ಚರ್ಚೆಗೆ ಬರುತ್ತದೆ ಎಂದು ಹೇಳಿ, ಮಾಡಿರತಕ್ಕಂಥ ತಂತ್ರ ಇದು.

SRI H. EKANTHAIAK : They have not supplied any documents.

ಶ್ರೀ ಕೆ.ಎಸ್. ಈಶ್ವರಪ್ಪ : ದಾಖಲೆಗಳು ಸಿಕ್ಕಿದರೆ ಸರಕಾರ ಪೇಚಿಗೆ ಸಿಕ್ಕಿಕೊಳ್ಳುತ್ತದೆ ಎಂದು ಈ ರೀತಿ ಮಾಡಿದ್ದಾರೆ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ : ಪ್ರಶ್ನೆ ಅದಲ್ಲ...

(ಗೊಂದಲ)

SRI D.B. CHANDRE GOWDA : I would like to know from the Hon.Minister for Parliamentary Affairs, Are we entitled to certain documents, other than the one, which are called classified? If so, why your Government is trying to...

ಶ್ರೀ ಎಂ. ವೀರಪ್ಪಮೊಯಿಲಿ : ತಾವು ದಯಮಾಡಿ ಸ್ವಲ್ಪ ಈಲ್ಡ್ ಆಗಿರಿ. ತಾವು ಹಿರಿಯ ಸದಸ್ಯರು. ಈಗ ನಾವು ತಮ್ಮ ಸದುದ್ದೇಶದ ಬಗ್ಗೆ ಏನೂ ಪ್ರಶ್ನೆ ಮಾಡುತ್ತಿಲ್ಲ.

ಪ್ರಶ್ನೆ ಇಲ್ಲಿ ಸೀಮಿತವಾಗಿದೆ. ತಾವು ಒಂದು ಹಕ್ಕುಚ್ಯುತಿ ಸೂಚನೆಯನ್ನು ಕೊಟ್ಟಿದ್ದಾರೆ. ಹಕ್ಕುಚ್ಯುತಿ ಸೂಚನೆಯ ಪ್ರತಿ ನನ್ನ ಬಳಿಕೂಡ ಇದೆ. ಇಲ್ಲಿ ಪ್ರಶ್ನೆ ಏನೆಂದರೆ ತಾವು 19ನೇ ತಾರೀಖಿಗೆ ಕೆಲವೊಂದು ದಾಖಲೆಗಳನ್ನು ಕೇಳಿದ್ದಾರೆ. ದಾಖಲೆಗಳನ್ನು ಕೇಳಿದ ಮೇಲೆ 23ನೇ ತಾರೀಖಿಗೆ ಇಲಾಖಾ ಕಾರ್ಯದರ್ಶಿಯವರು ಒಂದು ಉತ್ತರವನ್ನು ಕಳುಹಿಸಿದ್ದಾರೆ ಉತ್ತರ ಕಳುಹಿಸಿದ ಮೇಲೆ ತಾವು ಹಕ್ಕುಚ್ಯುತಿ ಆಗಿದೆ ಎಂದು ಹಕ್ಕುಚ್ಯುತಿ ಎತ್ತಿದ್ದೀರಿ. ಈಗ ಪ್ರಶ್ನೆ ಏನೆಂದರೆ ಕಾರ್ಯದರ್ಶಿಗಳ ಪತ್ರ ಮತ್ತು ಸನ್ಮಾನ್ಯ ಹಿರಿಯ ಸದಸ್ಯರು ಎನು ದಾಖಲೆಗಳನ್ನು ಕೇಳಿದ್ದಾರೆ, ಅದರ ಬಗ್ಗೆ ಸ್ವಲ್ಪಮಟ್ಟಿಗೆ ಮಾಹಿತಿ ಈ ಕಡೆಗೆ ದೊರಕಿಸಿ ಕೊಟ್ಟರೆ ನಾವು ಇವತ್ತು ಸಂಜೆಯೊಳಗೆ ಅದರ ಬಗ್ಗೆ ವಿವರವನ್ನು ಒದಗಿಸುತ್ತೇನೆ.

Sri C. BYRE GOWDA : That is what exactly he is doing. Let him say what he wants to say.

ಶ್ರೀ ಎಂ. ವೀರಪ್ಪ ಮೊಯಿಲಿ : ಅವರು ಹೇಳಿರುವುದು ಎನು? ದಾಖಲೆಗಳನ್ನು ಕೇಳಿದ್ದಾರೆ, ದಾಖಲೆಗಳನ್ನು ನಾವು ದಾಖಲೆ ಕೊಡಬೇಕು. ದಾಖಲೆ ಕೊಡತಕ್ಕಂಥಾದ್ದು ಇದ್ದರೆ ನಾವು ಕೊಡುತ್ತೇವೆ. ಅದರಲ್ಲೇನು?

I am telling you.

ಈ ಸದನಕ್ಕೆ ನಾನು ಹೇಳುತ್ತೇನೆ. ಅದರಿಂದ ಒಂದು ವೇಳೆ ಇದು ನಿಜವಾಗಿಯೂ ಕೊಡತಕ್ಕಂಥ ದಾಖಲೆಯಾಗಿದ್ದರೆ, ಅದನ್ನು ನಾವು ಕೊಡದಿದ್ದರೆ ತಾವು ಈ ಇನ್‌ಫರೆನ್ಸ್‌ಗೆ ಬರಬಹುದು. ಮಾನ್ಯ ವಿರೋಧಪಕ್ಷದ ನಾಯಕರು

ಏನು ಹೇಳಿದ್ದಾರೆ ಅದರ ಮೇಲೆ ಬೇಕಾದರೆ ಮಾತನಾಡಲಿ ಇಲ್ಲ ಏನೋ ಮುಚ್ಚಿರುತ್ತಿದ್ದಾರೆ ಎಂದು ಆಮೇಲೆ ಹೇಳಿ. ಆದರೆ ಅದನ್ನು ಹೇಳುವುದನ್ನು ಈಗ ಹೇಳಬೇಡಿ. ನಾವು ಕೊಡುವುದೇ ಇಲ್ಲ ಎಂದು ಹೇಳಿದ ಮೇಲೆ...

ಶ್ರೀ ವಾಟಾಳ್ ನಾಗರಾಜ್ : ಕೊಡುವುದೇ ಇಲ್ಲ ಎಂದು ಕಾಗದ ಬರೆದ ಮೇಲೆ ಏನು ಹೇಳುವುದಕ್ಕಾಗುತ್ತದೆ?

SRI D.B. CHANDRE GOWDA : Every time when we raise the question of privilege issue on the Floor of the House, time and again, the Hon.Minister gets up and submits to the House that we should not discuss of going to the merits or details of the case and the Chair gives the impression to us that till such time Chair decides whether it amounts to breach of privilege or not, we are not supposed to discuss it here. Ultimately, if a decision comes from the Chair to the effect that it is not a breach of privilege, so, the issue is gone. Is that the way of conducting the House. I seek the guidance of the Chair.

ಉಪಾಧ್ಯಕ್ಷಣೀಯವರು : ಈಗ ಮಾನ್ಯ ಸದಸ್ಯರಾದ ವಿಕಾಂತಯ್ಯನವರು ಡೀಟೈಲ್ಸ್‌ಗೆ ಹೋಗುವುದು ಬೇಡ. ಅವರು ಪ್ರಿವಿಲೇಜ್ ಮೋಷನ್ ಏನು ಕೊಟ್ಟಿದ್ದಾರೆ, ಅದರ ಬಗ್ಗೆ ಎರಡು ಮಾತು ಹೇಳಲಿ.

ಶ್ರೀ ಡಿ.ಬಿ. ಚಂದ್ರೇಗೌಡ : ಇನ್ನು ಡೀಟೈಲ್ಸ್‌ಗೆ ಯಾವಾಗ ಹೋಗುವುದು. Let me know, Because this is not the first time I am raising privilege issue.

ಇಲ್ಲಿ ಪ್ರಶ್ನೆ ಏನೆಂದರೆ ಡೀಟೈಲ್ಸ್‌ಗೆ ಹೋಗಬಾರದೆಂದು ಇನ್ನೂ ನಾವು ಡೀಟೈಲ್ಸ್‌ಗೆ ಹೋಗಿ ಚರ್ಚೆ ಮಾಡುವುದಿಲ್ಲ, ಮಾಡದೇ ಇದ್ದಾಗ ಎನಾಗುತ್ತದೆ, We wait for the decision of the Chair.

ಚೇರ್‌ನಿಂದ ನಮಗೆ ಡೀಟೈಲ್‌ಯಾಗಿ ಯಾವ ವಿಚಾರವನ್ನೂ ಚರ್ಚೆಮಾಡುವುದಕ್ಕೆ ಆಗುವುದಿಲ್ಲ. Umpteen number of privilege issues, have raised. We are not permitted to discuss. Ultimately, the decision comes from the Chair. I would like to know from the moment that we raise the privilege issue, till it is disposed off by the Speaker, ಯಾವ ಸಮಯಕ್ಕೆ ನಮಗೆ ಡೀಟೈಲ್ಸ್, ಅನ್ನು ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತದೆ ಅದಾದರೂ ಒಂದು ನಿರ್ಣಯ ಬರಲಿ. Mr. Moily , this is not the way that the of rights of the members should be suppressed,

Sri M. VEERAPA MOILY : Madam Speaker, we are at the stage Rule 191.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷಣೆಯವರೇ ನಾನು ಹೇಳುವುದೇನೆಂದರೆ ಮಾನ್ಯ ಸದಸ್ಯರು ಹಕ್ಕುಚುತಿ ನಿರ್ಣಯವನ್ನು ಕಳುಹಿಸಿದ್ದಾರೆ. ಆವರು ಅದನ್ನು ಎತ್ತಿ ಅದರಲ್ಲಿರತಕ್ಕ ವಿಚಾರ ಏನು ಎನ್ನುವುದನ್ನು ಪ್ರಸ್ತಾಪ ಮಾಡಲಿ ಅವರು ಹೇಳುವುದಕ್ಕೆ ಬಿಡಿ.

SRI M. VEERAPPA MOILY: Let me make my point very clear. I am not obstructing.

ಶ್ರೀ ಸಿ. ಬೈರೇಗೌಡ: ಅವರು ಹೇಳಲಿ. The House must know what he is saying. Let him say.

ಶ್ರೀ ಕೆ.ಎಸ್. ಈಶ್ವರಪ್ಪ: ಅವರು ಹೇಳುವುದಕ್ಕೆ ಬಿಡಿ

(ಗೊಂದಲ)

ಉಪಾಧ್ಯಕ್ಷರು : ನಾನು ಅವರಿಗೆ ಈ ರೈಸ್ ಇಷ್ಯೂವನ್ನು ಮಾಡುವುದಕ್ಕೆ ಅವಕಾಶ ಕೊಟ್ಟಿದೇನೆ. ಆದರೆ ವಿಷಯನ್ನು ಚರ್ಚೆ ಮಾಡುವ ಸ್ಟೇಜಿಗೆ ನಾವಿನ್ನೂ ಹೋಗಿಲ್ಲ. I have not given my consent. You can just raise the issue. That is all.

SRI H. EKANTHAIAH : I am not discussing

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷಣಿಯವರೇ ನಾನು ತಮ್ಮಲ್ಲಿ ಕೇಳುವುದೇನೆಂದರೆ ಅವರು ಏನು ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಿದ್ದಾರೆ ಅದರ ಹಿನ್ನೆಲೆಯಾಗಿ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಸುಮ್ಮನೆ ಮಂಡಿಸಿ ಏನೂ ಹೇಳುವುದಕ್ಕೆ ಅವರಿಗೆ ಅವಕಾಶ ಕೊಡದಿದ್ದರೆ ಹೇಗೆ? ತಾವು ಈ ಸಭೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಬೇಕೆಂದು ಹೋಗುತ್ತಿದ್ದೀರಿ ಅದು ಸರಿಯಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಹೇಳಿದಹಾಗೆ with utmost humility at my command, I would appeal to the Chair, let the whole world know what is happening here. ಏತಕ್ಕೆ ಅದನ್ನು ಮುಚ್ಚಿಡುವ ಪ್ರಯತ್ನ?

ಶ್ರೀ ಹೆಚ್. ಏಕಾಂತಯ್ಯ : ಒಂದನ್ನು ಜ್ಞಾಪಕಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ.

SRI M.VEERAPPA MOILY : I think, hon members not correctly understood what all I have said. I am making a submission here. we are not obstructing here to make a submission under rule 191. you have raised certain matter under rule 191. you have said, what is the purpose? But it is okay. When I intervened, I intervened when he wanted to discuss on the matter you said just because you want to suppress this things kand that It is a question of inference. What I have said inference can be drawn You are entitled to draw any inference: but that can be drawn only when we start discussing about the marit of the case and when consent is given. you arenot entitled to draw an inference then when you wanted to erawa an interence, what I submitted was government is not prepared to suppress any document which can be produced or submitted to the members. Suppose, an officer or a Secretary of a particular department has sought some claffication from the Secretary, when you wanted the document. The propriety of the letter written by the Secretary, Irrigation or whatever the department to the Secretary Legislature, asking for a

clarification will be given and these are the documents which the member and you will have to submit, if that letter has gone, may be that Secretary would have submitted the documents. But that stage has not come. It is very premature. I think, raising the issue, itself is not appropriate at this stage. What the Secretary has said that the document is with me. He said with reference to your letter addressed to Secretary, the Karnataka Legislature, not to the member. What the Secretary, Irrigation has said in his letter addressed to the Secretary, Karnataka Legislature is:

With reference to your letter cited above on the subject I am to request you to clarify under provisions of the rules and under what context, the government is obliged to supply copies of such government orders to members of legislature."

This clarification was sought by the Secretary. If the Secretary, Legislature were to write that you will have to produce the documents under the following provisions, and suppose, that Secretary, Irrigation refuses, then you will have a cause of action. This is the first part of my argument.

(Interruptions)

ಶ್ರೀ ವಾಟಾಳ್ ನಾಗರಾಜ್ : ಅವರಿಗೆ ಹೇಳುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ?

ಉಪಾಧ್ಯಕ್ಷರು : ಅವರು ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅವರಿಗೆ ಅವಕಾಶ ಕೊಟ್ಟಿದ್ದೀರಿ.

ಉಪಾಧ್ಯಕ್ಷರು : ರೈಸ್ ಮಾಡಲಿಕ್ಕೆ ಮಾತ್ರ ನಾನು ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಹೌದು. ಅವರು ಹೇಳುವುದಕ್ಕೆ ಬಿಡುತ್ತಿಲ್ಲವಲ್ಲಾ?

ಶ್ರೀ ಹೆಚ್. ವಿಶ್ವನಾಥಯ್ಯ : ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ ನಾವೆಲ್ಲರೂ ಮುಕ್ತವಾದಂಥ ಆಡಳಿತ ವ್ಯವಸ್ಥೆಯಲ್ಲಿದ್ದೇವೆ. ಮುಕ್ತವಾದಂಥ ಸರ್ಕಾರವನ್ನು ನಡೆಸುತ್ತಿದ್ದಾರೆ. ಮಾನ್ಯ ವೀರಪ್ಪ ಮೊಯಿಲಿಯವರು ಒಂದು ಮಾತನ್ನು ಹೇಳಿದ್ದನ್ನು ಅವರಿಗೆ ಜ್ಞಾಪಕಕ್ಕೆ ತರುತ್ತಿದ್ದೇನೆ. ಜಿ.ವಿ.ಕೆ. ರಾವ್ ಅವರ ವರದಿಯನ್ನು ಈ ಸದನದ ಮುಂದೆ ಮಂಡಿಸಬೇಕೆಂದು ವಾದವನ್ನು ಮಾಡಿದರು. ವಾದ ಮಾಡಿದಂಥ ಸಂದರ್ಭದಲ್ಲಿ ಅಂದು ಇದ್ದಂಥ ಮುಖ್ಯ ಮಂತ್ರಿಗಳು ಮಂಡನೆ ಮಾಡಲಿಕ್ಕೆ ಒಪ್ಪಿಗೆಯನ್ನು ನೀಡಿರಲಿಲ್ಲ. ಅಂಥ ಸಂದರ್ಭದಲ್ಲಿ ಅವರು ಹೇಳಿದಂಥ ಪದವನ್ನು ಹೇಳಿದರೆ "If they don't produce it, I know how to snatch it. I am capable of it, that is quite different." You did say. I am repeating it.

ಅದೇ ಶಕ್ತಿ ನಮಗೂ ಇದೆ. ಸನ್ಮಾನ್ಯ ಅಧ್ಯಕ್ಷಿಣಿಯವರೇ ಏತಕ್ಕೋಸ್ಕರ ಈ ಸರ್ಕಾರಿ ಆದೇಶಗಳನ್ನು ಹೇಳುತ್ತಿದ್ದೇನೆಂದರೆ ಈ ಆದೇಶಗಳು ಎಷ್ಟು ಪ್ರಾಮುಖ್ಯತೆಯನ್ನು ಹೊಂದಿವೆ ಎಂಬ ಮಾತನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಈ ಆದೇಶಗಳ ಮುಖಾಂತರ ಸರ್ಕಾರ ಅನ್ಯಾಯವಾಗಿ ಖಜಾನೆಗೆ ನಷ್ಟ ಉಂಟು ಮಾಡುವಂಥ ರೀತಿಯಲ್ಲಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರಕ್ಕೆ ಕಾರಣವಾಗಿದೆ ಈ ಆದೇಶಗಳು. ಆ ದೃಷ್ಟಿಯಿಂದ ಅದನ್ನು ಈ ಮನೆಯಲ್ಲಿ ಪ್ರಸ್ತಾಪ ಮಾಡಬೇಕೆಂಬ ಇಷ್ಟವನ್ನು ಹೊಂದಿದ್ದೆ. ತಾವು ಹೇಳುತ್ತೀರಿ ಏನಾದರೂ ಒಂದು ಆರೋಪವನ್ನು ಮಾಡಬೇಕಾದರೆ ಅದನ್ನು ಸಾಬೀತು ಮಾಡಬೇಕು ಎಂದು ಅಂಥ ಒಂದು ಸಾಬೀತು ಮಾಡಲಿಕ್ಕೋಸ್ಕರ ಸರ್ಕಾರಿ ಆದೇಶಗಳನ್ನು ತಮ್ಮಿಂದ ಕೊಡಬೇಕೆಂದು ತಮಗೆ ಒಂದು ಮನವಿಯನ್ನು ನಾನು ಕೊಟ್ಟಿದ್ದೆ. ಆದರೆ ಆ ಮನವಿ ಏನಾಗಿದೆ? 19ನೇ ತಾರೀಖಿ ಕೊಟ್ಟಂಥ ಮನವಿ ಒಂದು ಸರ್ಕಾರಿ ಆದೇಶವನ್ನು ಈ ಶಾಸನ ಸಭೆಯ ಸದಸ್ಯರಿಗೆ ಕೊಡಬೇಕು ಎಂದರೆ ಅದನ್ನು ಒದಗಿಸಲಿಕ್ಕೆ ಸಾಧ್ಯವಾಗುತ್ತಿಲ್ಲ ಈ ಕಾರ್ಯಾಲಯಕ್ಕಾಗಲೀ ಈ ಸರ್ಕಾರಕ್ಕಾಗಲೀ ಎಂದರೆ ಅದಕ್ಕಿಂಥ ಹಕ್ಕುಚ್ಯುತಿ ಮತ್ತೊಂದು ಏನಿದೆ ಅಧ್ಯಕ್ಷರೇ? ಆದ್ದರಿಂದ ನಾನು ಹೇಳುತ್ತಿದ್ದೇನೆ. ಏನು ಸರ್ಕಾರಿ ಆದೇಶಗಳನ್ನು ಪೂರೈಕೆ ಮಾಡಿಲ್ಲ. ಉದ್ದೇಶಪೂರ್ವಕವಾಗಿ ಕೊನೆಯ ದಿವಸದವರೆಗೆ ಪೂರೈಕೆ ಮಾಡಿಲಿಲ್ಲ.

ಉಪಾಧ್ಯಕ್ಷರು : ಏತಕ್ಕೆ ಮಾಡಿಲ್ಲ?

ಶ್ರೀ ಹೆಚ್. ಏಕಾಂತಯ್ಯ : ಏತಕ್ಕೋಸ್ಕರ ಈ ಮಾತನ್ನು ಹೇಳುವುದಕ್ಕೆ ಏನಾದರೂ ಆಧಾರ ಇದೆಯೇ ಇದೆ. 20ನೇ ತಾರೀಖಿನ ದಿವಸ ಈ ವಿಧಾನ ಸಭೆಯಲ್ಲಿಯೇ ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ವಿಧಾನಸಭೆಯಲ್ಲಿ 10 ದಿವಸದ ಮೊದಲೇ ಪ್ರಸ್ತಾಪ ಮಾಡಿದ್ದರೂ ಇವತ್ತಿನ ದಿವಸ ನೀವು ಆ ಸರ್ಕಾರೀ ಆದೇಶಗಳನ್ನು ನಮಗೆ ಒದಗಿಸುವುದಕ್ಕೆ ಅಸಮರ್ಥರಾಗಿದ್ದೀರಿ ಅಂದರೆ ಇದಕ್ಕಿಂತ ನಾಚಿಕೆಗೇಡಿತನದ ಪ್ರಸಂಗ ಏನಾದರೂ ಇದೆಯೇ? ಇದು ಒಂದು ಆರೋಪವನ್ನು ನಮ್ಮ ಮೇಲೆ ಅವಮಾನಪಡಿಸುವಂತಹ ರೀತಿಯಲ್ಲಿದೆ. ಅವರು ಇವತ್ತಿನ ದಿವಸ ಒಂದು ಪತ್ರವನ್ನು ಬರೆದಿದ್ದಾರೆ. ಅದರ ಹಿನ್ನೆಲೆಯಲ್ಲಿ ಮಾತನ್ನು ಹೇಳಿದ್ದೇನೆ. ಆ ಹಿನ್ನೆಲೆಯಲ್ಲಿ ಅವರು ಉದ್ದೇಶಪೂರ್ವಕವಾಗಿ ಈ ಶಾಸನಸಭಾ ಸದಸ್ಯರು ಏನು ಇದ್ದಾರೆ ಅವರ ಕಾರ್ಯನಿರ್ವಹಣೆಯಲ್ಲಿ ಅಡ್ಡಿ ಮಾಡಬೇಕು. ಈ ವಿಚಾರಗಳನ್ನು ವಿಧಾನಸಭೆಯಲ್ಲಿ ಏನಾದರೂ ಮಾಡಿ ಪ್ರಸ್ತಾಪ ಮಾಡದಂತೆ ನಿಲ್ಲಿಸಬೇಕು ಎಂಬ ದುರುದ್ದೇಶದಿಂದ ಈ ಒಂದು ಸರ್ಕಾರಿ ಪ್ರತಿಗಳನ್ನು ಕೊಟ್ಟಿಲ್ಲ. ಇದು 106 ಕೋಟಿ ರೂಪಾಯಿಗಳನ್ನು ಖರ್ಚುಮಾಡುವಂತಹ ಇಲಾಖೆಗೆ ಸಂಬಂಧಪಟ್ಟಿದೆ.

ಶ್ರೀ ಕೆ.ಹೆಚ್. ಪಾಟೀಲ್ : ಯಾವ ಇಲಾಖೆ?

ಶ್ರೀ ಹೆಚ್. ಏಕಾಂತಯ್ಯ : ನೀರಾವರಿ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗೆ ಸಂಬಂಧ ಪಟ್ಟಿದೆ. ಈ ನಾಲ್ಕು ಆದೇಶಗಳನ್ನು ಅವರು ಕೊಡದೇ ಇರುವುದಕ್ಕೆ ಮುಖ್ಯವಾದ ಕಾರಣ ಏನು ಎಂದು ಇವತ್ತು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು : ದಯಮಾಡಿ ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಆದೇಶವನ್ನು ಕೊಡುತ್ತೇವೆ.

ಶ್ರೀ ಹೆಚ್. ವಿಶ್ವನಾಥಯ್ಯ : ನೀವು ಕೊಟ್ಟಿಲ್ಲ. ನೀವು ಇವತ್ತು ಕೊಡದೇ ಹೋದರೆ ನಾಳೆ ದಿವಸ ಆ ಪ್ರತಿಗಳನ್ನು ತೆಗೆದುಕೊಂಡು ಏನು ಮಾಡಬೇಕು? ಅದಕ್ಕೆ ಬೇರೆ ವಿಧಾನ ಇದೆ. ಆದರೆ ಇವತ್ತು ಆ ಸರ್ಕಾರೀ ಆದೇಶದ ಆಧಾರದ ಮೇಲೆ ಕೋಟ್ಯಾಂತರ ರೂಪಾಯಿಗಳ ಬಟವಾಡೆ ಮಾಡಿದ ಮೇಲೆ ನಾನು ಅದನ್ನು ತೆಗೆದುಕೊಂಡು ಏನು ಮಾಡಬೇಕು? ಅದಕ್ಕಿಂತ ಮೊದಲು ಇಲ್ಲಿ ಸದನದ ಗಮನಕ್ಕೆ ತಂದಿದ್ದರೆ ಅದರ ಬಗ್ಗೆ ಚರ್ಚೆ ಆಗಿದ್ದರೆ ಸರ್ಕಾರವನ್ನು ಮನವೊಲಿಸಲಿಕ್ಕೆ ಸಾಧ್ಯ ಆಗುತ್ತಿತ್ತು. ಇವತ್ತಿನ ದಿವಸ ಆದೇಶದ ಮೇಲೆ ಕೋಟ್ಯಾಂತರ ರೂಪಾಯಿ ಪರಿಹಾರವನ್ನು ಅವರಿಗೆ ಕೊಟ್ಟಾದ ಮೇಲೆ ನಾನು ಪ್ರಸ್ತಾಪ ಮಾಡಬೇಕೇ. ಅದಕ್ಕಿಂತ ಮೊದಲೇ ಪ್ರಸ್ತಾಪ ಮಾಡಬೇಕಾದ ಅವಶ್ಯಕತೆ ಇದೆಯೇ ಅಥವಾ ಇಲ್ಲವೇ? ಆದ್ದರಿಂದ ನಾನು ತಮಗೆ ಕೇಳುತ್ತಿದ್ದೇನೆ. Prime fecie, it amounts to breacb of privilege of this House and also the Members. ಅದಕ್ಕೋಸ್ಕರ ಒಂದು ಪ್ರಸ್ತಾಪವನ್ನು Suemoto under Rule 195, it may be referred to the Privilege committee.

ಉಪಾಧ್ಯಕ್ಷರು : ಈಗ ತಾವು ಕಳಿಸಿರುವಂತಹ ಈ ಒಂದು ಹಕ್ಕಬಾಧ್ಯತಾ ಪತ್ರದ ವಿಷಯದಲ್ಲಿ ಇದು ಯಾವ ಇಲಾಖೆಯದು ಯಾವ ಕಾರ್ಯದರ್ಶಿ ಎಂಬ ವಿವರಗಳನ್ನು ನೀವು ನನಗೆ ಕೊಟ್ಟಿಲ್ಲ. ಸ್ಪೀಕರ್‌ರವರಿಗೆ ತಾವು ಕೊಟ್ಟಿರುವ ಕಾಗದದಲ್ಲಿ ಯಾವುದೇ ವಿವರಗಳಿಲ್ಲ. ವಿವರಗಳನ್ನು ಒದಗಿಸಿ ಮತ್ತು ಅದನ್ನು ತಾವು ಒದಗಿಸಿದ ಮೇಲೆ ನಾನು ಪರಿಶೀಲನೆ ಮಾಡಿ ನನ್ನ ನಿರ್ಣಯ ಕೊಡುತ್ತೇನೆ.

ಶ್ರೀ ಹೆಚ್. ವಿಶ್ವನಾಥಯ್ಯ : ಈಗಾಗಲೇ ವಿವರ ತಮ್ಮಲ್ಲಿ ಇದೆ.

ಉಪಾಧ್ಯಕ್ಷಿಣಿಯವರು : ನೀವು ವಿವರಗಳನ್ನು ಒದಗಿಸಿ.

ಶ್ರೀ ಹೆಚ್. ವಿಶ್ವನಾಥಯ್ಯ : ದಯಮಾಡಿ ಕ್ಷಮಿಸಬೇಕು. ಇದು ನಿಮ್ಮ ಕಾರ್ಯಾಲಯಕ್ಕೆ ಸಂಭಂದಪಟ್ಟಿದ್ದು. ಇದು ನಿಮ್ಮ ಗೌರವದ ಪ್ರಶ್ನೆ ಸದನದ ಗೌರವ ಪ್ರಶ್ನೆ.

ಉಪಾಧ್ಯಕ್ಷಿಣಿಯವರು : ವಿಷಯಗಳನ್ನು ಒಟ್ಟಿಗೆ ಹೇಳಿ.

ಶ್ರೀ ಹೆಚ್. ವಿಶ್ವನಾಥಯ್ಯ : ವಿಧಾನ ಸಭೆಯ ವ್ಯಾಪ್ತಿ ಬಗ್ಗೆ ಇದು ಹಕ್ಕುಚ್ಯುತಿ ಆಗಿದೆ. ಇದು ಕೇವಲ ಸಭೆ ಮತ್ತು ನಮ್ಮದೇ ಅಲ್ಲ ಆದ್ದರಿಂದ ಈಗಾಗಲೇ ಇದು ನಿಮ್ಮ ಕಕ್ಷಿಯಲ್ಲಿರುವುದರಿಂದ ಕಾಗದ ಪತ್ರಗಳನ್ನು ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ. ನಾನು ತಮ್ಮ ಕಾರ್ಯಾಲಯಕ್ಕೆ ಬರವಣಿಗೆಯಲ್ಲಿ ಕೊಟ್ಟಿದ್ದೇನೆ. ಆ ವಿಚಾರವನ್ನು ತಾವು ನಮಗೆ ತಿಳಿಸಿದ್ದೀರಿ. ಇದನ್ನು ಪುನಃ ನಾವು ತಮಗೆ ಪ್ರತಿಗಳನ್ನು ಕೊಡಬೇಕೇ?

ಉಪಾಧ್ಯಕ್ಷಿಣಿಯವರು : ಈಗ ತಾವು ಏನು ಪ್ರಸ್ತಾಪ ಮಾಡಿದ್ದೀರಿ ಈ ವಿಷಯವನ್ನು ನಾನು ಪರಿಶೀಲಿಸಿ ಆ ಮೇಲೆ ನಾನು ನನ್ನ ರೂಲಿಂಗ್‌ಅನ್ನು ಕೊಡುತ್ತೇನೆ.